ಕನ್ನಡದ ಸಾಮ್ರಾಜ್ಯಗಳು

# ಬನವಾಸಿಯ ಕದಂಬರು

ವಿಕ ಕನ್ನಡ ಉತ್ಸವ

• **ಕಾಲಾವಧಿ:** ಕ್ರಿ.ಶ.345-525 • **ರಾಜಧಾನಿ:** ಬನವಾಸಿ

ಕದಂಬ ವಂಶ, ಕನ್ನಡದ ಮೊದಲ ರಾಜಮನೆತನ ಎಂಬ ಅಗ್ಗಳಿಕೆ ಹೊಂದಿದೆ. ಮಯೂರ ವರ್ಮನು ಕ್ರಿ.ಶ. 345ರಲ್ಲಿ ಕಂಚಿಯ ಪಲ್ಲವರನ್ನು ಸೋಲಿಸಿ ಕದಂಬ ರಾಜವಂಶವನ್ನು ಕೀರ್ತಿಯ ಶಿಖರಕ್ಕೆ ಏರಿಸಿದನು. ಕದಂಬರ ಮೂಲಪುರುಷನೂ ಇವನೇ. ಈತನು ಮೂಲತಃ ಕ್ಷತ್ರಿಯನಲ್ಲ, ಬ್ರಾಹ್ಮಣ ಮಯೂರ ಶರ್ಮಾ. ಈತನ ಮನೆಯ ಮುಂದೆ ಒಂದು ಕದಂಬದ ಮರವಿದ್ದುದರಿಂದ ಮನೆತನಕ್ಕೆ ಕದಂಬ ಮನೆತನ ಎಂದು ಹೆಸರಿದ್ದಿತೆಂಬ ಕತೆ.



ಕಾಕುಸ್ಥವರ್ಮನ ಆಳ್ವಿಕೆಯಲ್ಲಿ ಕದಂಬರ ಕೀರ್ತಿಯು ಉತ್ತುಂಗಕ್ಕೆ ಏರಿತು. ರಾಜನ ಮಿತ್ರತ್ವ ಬಯಸಿ ಉತ್ತರ ಭಾರತದ ಪ್ರಬಲ ದೊರೆಗಳಾದ ಗುಪ್ತರು ಮದುವೆ ಸಂಬಂಧ ಬೆಳೆಸಿದ್ದರು. ಕದಂಬ ಇತಿಹಾಸವನ್ನು ಸಂಸ್ಕೃತ ಮತ್ತು ಕನ್ನಡ ಕೃತಿಗಳಲ್ಲಿ ಕಾಣಬಹುದು. ತಾಳಗುಂದ, ಗುಂಡನೂರ್, ಚಂದ್ರವಳ್ಳಿ, ಹಲಸಿ ಮತ್ತು ಹಲ್ಮಿಡಿ ಶಾಸನಗಳು ಈ ರಾಜಮನೆತನದ ಬಗ್ಗೆ ಬೆಳಕು ಚೆಲ್ಲುತ್ತವೆ. ಕನ್ನಡವನ್ನು ಆಡಳಿತಾತ್ಮಕ ಭಾಷೆಯಾಗಿ ಉಪಯೋಗಿಸಿದ ಮೊದಲ ರಾಜರು ಕದಂಬರು. ಇದಕ್ಕೆ ನಾಣ್ಯಗಳೇ ಸಾಕ್ಷಿ. ಹಲ್ಮಿಡಿಯಲ್ಲಿ ದೊರೆತ ಕಾಕುತ್ಸವರ್ಮನ ಕಾಲದ ಶಾಸನ(ಕ್ರಿ.ಶ 450) ಕನ್ನಡದ ಮೊಟ್ಟಮೊದಲನೆಯ ಶಾಸನ. ಕದಂಬ ಶಿಖರ ಇವರ ವಾಸ್ತು ವೈಶಿಷ್ಟ್ಯ. ಹತ್ತನೇ ಶತಮಾನದಲ್ಲಿ ಕಟ್ಟಿಸಿದ ಶಿವನ ದೇವಸ್ಥಾನ (ಮಧುಕೇಶ್ವರ) ಬನವಾಸಿಯ ಆಕರ್ಷಣೆ.

Scanned by CamScanner

ಕನ್ನಡದ ಸಾಮ್ರಾಜ್ಯಗಳು

# ತಲಕಾಡಿನ ಗಂಗರು

ವಿಕ ಕನ್ನಡ ಉತ್ಸವ

• ಕಾಲಾವಧಿ: ಕ್ರಿ.ಶ.350-1000 • ರಾಜಧಾನಿ: ಕೋಲಾರ, ತಲಕಾಡು

ಸುಮಾರು 4ನೇ ಶತಮಾನದಿಂದ 10ನೇ ಶತಮಾನದವರೆಗೆ ದಕ್ಷಿಣ ಕರ್ನಾಟಕ ಮತ್ತು ತಮಿಳುನಾಡಿನ ಉತ್ತರಭಾಗಗಳನ್ನು ಆಳಿದರು. ಚಾಲುಕ್ಯ, ರಾಷ್ಟ್ರಕೂಟರು ಇವರ ಸಮಕಾಲೀನರು.



ಗಂಗರ ಮೊದಲ ಅರಸ ಕೊಂಗಣಿವರ್ಮ ಮಾಧವನು ಕೋಲಾರವನ್ನು ತನ್ನ ರಾಜಧಾನಿಯಾಗಿ ಮಾಡಿ 20 ವರುಷ ಆಳಿದನು. 8ನೆಯ ಶತಮಾನದ ದೊರೆ ಶ್ರೀಪುರುಷ ತಲಕಾಡಿನಿಂದ ಆಳತೊಡಗಿದ. ನಂದಿಬೆಟ್ಟ ಗಂಗ ರಾಜ್ಯದ ಪ್ರಮುಖ ಗಿರಿದುರ್ಗ. ಅವರ ಆಡಳಿತ ಈಗಿನ ಮೈಸೂರು, ಹಾಸನ, ಚಾಮರಾಜನಗರ, ತುಮಕೂರು, ಕೋಲಾರ, ಮಂಡ್ಯ ಹಾಗು ಬೆಂಗಳೂರನ್ನು ಒಳಗೊಂಡಿತ್ತು. ಗಂಗರು ತಮಿಳುನಾಡು ಮತ್ತು ಆಂಧ್ರ ಪ್ರದೇಶದ ಕೆಲ ಪ್ರದೇಶಗಳಿಗೆ ರಾಜ್ಯವನ್ನು ವಿಸ್ತರಿಸಿದ್ದರು. ಹರಿವರ್ಮನು (ಕ್ರಿ.ಶ. 390) ತಲಕಾಡನ್ನು ರಾಜಧಾನಿ ಮಾಡಿದನು. ಗಂಗರ ಪ್ರಸಿದ್ಧ ಅರಸ ದುರ್ವಿನೀತ (555-605) ಸಂಗೀತ, ನೃತ್ಯ, ಆಯುರ್ವೇದದಲ್ಲಿ ಪಾರಂಗತ. ಎಲ್ಲ ಪ್ರಮುಖ ಧರ್ಮಗಳಿಗೆ (ಜೈನ, ಶೈವ, ವೈಷ್ಣವ) ಪ್ರೋತ್ಸಾಹ ನೀಡಿದರು. ಜೈನ ಧರ್ಮ 8ನೆ ಶತಮಾನದಲ್ಲಿ ರಾಜ ಒಂದನೇ ಶಿವಮಾರನ ಆಳ್ವಿಕೆಯಲ್ಲಿ ಬೆಳೆಯಿತು. ರಾಜನು ಜೈನ ಬಸದಿಗಳನ್ನು ಕಟ್ಟಿಸಿದ. 2ನೇ ಬೂತುಗ ಮತ್ತು ಚಾವುಂಡರಾಯರು ಕಟ್ಟಾ ಜೈನರು. ಅವರು ಕಟ್ಟಿಸಿದ ಗೊಮ್ಮಟೇಶ್ವರ ಅದಕ್ಕೆ ಸಾಕ್ಷಿ. ಕನ್ನಡದ ಮಹಾಕವಿ ರನ್ನ ಚಾವುಂಡರಾಯನ ಬಳಿಯಿದ್ದ.

Scanned by CamScanner

ಕನ್ನಡದ ಸಾಮ್ರಾಜ್ಯಗಳು

# ಬಾದಾಮಿ ಚಾಲುಕ್ಯರು

• **ಕಾಲಾವಧಿ:** ಕ್ರಿ.ಶ. 350-999 • **ರಾಜಧಾನಿ:** ಬಾದಾಮಿ

ವಿಕ ಕನ್ನಡ ಉತ್ಸವ

ಇವರ ರಾಜಲಾಂಛನ ವರಾಹ ಆಗಿತ್ತು. ಒಂದನೇ ಪುಲಕೇಶಿಯು ಚಾಲುಕ್ಯವಂಶವನ್ನು ಬಾದಾಮಿಯಲ್ಲಿ ಪ್ರತಿಷ್ಠಾಪಿಸಿದನು. ಈ ಸಾಮ್ರಾಜ್ಯವು ಕಾವೇರಿ ಮತ್ತು ನರ್ಮದಾ ನದಿಗಳ ಮಧ್ಯದ ಜಾಗವನ್ನು ಒಟ್ಟುಗೂಡಿಸಿ ರಾಜ್ಯಭಾರ ನಡೆಸಿತು. ಇಮ್ಮಡಿ ಪುಲಕೇಶಿ ಈ ಮನೆತನದ ಪ್ರಸಿದ್ಧ ಅರಸ. ಈತ ನರ್ಮದಾ ನದಿ ಕಾಳಗದಲ್ಲಿ ಉತ್ತರ ಪಥೇಶ್ವರನೆಂದು ಪ್ರಸಿದ್ಧನಾದ ಹರ್ಷವರ್ಧನನ್ನು ಸೋಲಿಸಿದ. 641ರಲ್ಲಿ ಚೀನಾದ ಯಾತ್ರಿಕ ಹ್ಯುಯೆನ್‌ತ್ಸಾಂಗ್, ಪುಲಕೇಶಿಯ ಆಸ್ಥಾನಕ್ಕೆ ಭೇಟಿ ಕೊಟ್ಟು ಆತನ ಆಳ್ವಿಕೆಯನ್ನು ಹೊಗಳಿದ್ದಾನೆ. ಚಾಲುಕ್ಯರ ಕಲೆ ಮತ್ತು ವಾಸ್ತುಶಿಲ್ಪವನ್ನು ಐಹೊಳೆ, ಪಟ್ಟದಕಲ್ಲು, ಬಾದಾಮಿಯಲ್ಲಿ ಕಾಣಬಹುದು. ಚಾಲುಕ್ಯರ ಆಳ್ವಿಕೆ ದಕ್ಷಿಣ ಭಾರತದ ಇತಿಹಾಸದಲ್ಲಿ ಸುವರ್ಣ ಯುಗವೆಂದು ಇತಿಹಾಸ ತಜ್ಞರು ಪರಿಗಣಿಸಿದ್ದಾರೆ. ಈ ಸಾಮ್ರಾಜ್ಯದ ಉದಯದೊಂದಿಗೆ ದಕ್ಷ ಆಡಳಿತ, ಸಾಗರೋತ್ತರ ವ್ಯಾಪಾರ ಹಾಗು ವಾಸ್ತುಶಿಲ್ಪ ಮೇಲುಗೈಯಾದವು. ಕನ್ನಡ ಪ್ರಮುಖ ಭಾಷೆಯಾಗಿ ಹೊಮ್ಮಿತು. ಹಲವಾರು ನಾಣ್ಯಗಳಲ್ಲಿ ಕನ್ನಡ ಲಿಪಿಯಿದೆ. ಕಪ್ಪೆ ಆರಭಟ್ಟನ ಶಾಸನದಲ್ಲಿ ದೊರೆತ ತ್ರಿಪದಿಗಳು ಕನ್ನಡ ಕಾವ್ಯದ ಮೊದಲ ಸಾಲುಗಳು ಎಂದು ಪರಿಗಣಿಸಲಾಗಿದೆ. ಆಗಿನ ಪ್ರಮುಖ ಪಂಡಿತ ವಿಜ್ಞಾನೇಶ್ವರ ಮಿತಾಕ್ಷರ.




ಕನ್ನಡದ ಸಾಮ್ರಾಜ್ಯಗಳು

# ರಾಷ್ಟ್ರಕೂಟರು

• **ಕಾಲಾವಧಿ:** ಕ್ರಿ.ಶ. 8ರಿಂದ 10ನೇ ಶತಮಾನ • **ರಾಜಧಾನಿ:** ಕಲಬುರಗಿ

ವಿಕ ಕನ್ನಡ ಉತ್ಸವ

ದಂತಿದುರ್ಗನು ಚಾಲುಕ್ಯರ ಕೀರ್ತಿವರ್ಮನನ್ನು ಸೋಲಿಸಿ ಗುಲ್ಬರ್ಗವನ್ನು ಕೇಂದ್ರವಾಗಿಸಿ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಈತನು ಗುರ್ಜರ, ಕಳಿಂಗ, ಕೋಸಲ ಮತ್ತು ಶ್ರೀಶೈಲ ರಾಜರನ್ನು ಸೋಲಿಸಿದನು. ಧ್ರುವನ ಮೂರನೇ ಮಗನಾದ ಮುಮ್ಮಡಿ ಗೋವಿಂದನು ರಣರಂಗದಲ್ಲಿ ಹುಲಿ ಎನಿಸಿದ್ದ. ಈತನ ಉತ್ತರಾಧಿಕಾರಿ ಅಮೋಘವರ್ಷ ನೃಪತುಂಗ, ಮಾನ್ಯಖೇಟ ಅಥವಾ ಮಳಖೇಡವನ್ನು ರಾಜಧಾನಿಯಾಗಿಸಿ ಕನ್ನಡಿಗರ ಇತಿಹಾಸದಲ್ಲಿ ಅತಿ ಹೆಚ್ಚು ಕಾಲ ಆಳಿದ ಖ್ಯಾತಿ ಪಡೆದ. ಅವನ ಆಳ್ವಿಕೆಯಲ್ಲಿ ಕಲೆ, ಸಾಹಿತ್ಯ ಮತ್ತು ಧರ್ಮ ಸಮೃದ್ಧಗೊಂಡವು. ಕನ್ನಡ ಮತ್ತು ಸಂಸ್ಕೃತದಲ್ಲಿ ವಿದ್ವಾಂಸನಾಗಿದ್ದ ಈತ ಬರೆದ ಕವಿರಾಜಮಾರ್ಗ ಮತ್ತು ಸಂಸ್ಕೃತದ ಪ್ರಶ್ನೋತ್ತರ ಶತಮಾಲಿಕೆ ಸಾಹಿತ್ಯದ ಮೈಲುಗಲ್ಲುಗಳು. ರಾಷ್ಟ್ರಕೂಟರ ಪ್ರಭಾವ ಸಂಪೂರ್ಣ ಭಾರತದ ಮೇಲಿತ್ತು . ಸುಲೈಮಾನ್, ಅಲ್‌ಮಸೂದಿ ಮುಂತಾದವರು ಭಾರತದ ಅತಿ ದೊಡ್ಡ ಸಾಮ್ರಾಜ್ಯವೆಂದು ಹೇಳಿದ್ದಾರೆ. ಕನ್ನಡವು ಸಾಹಿತ್ಯಕ ಭಾಷೆಯಾಗಿ ಪ್ರಾಮುಖ್ಯ ಪಡೆಯಿತು. ಕಲೆ ಮತ್ತು ವಾಸ್ತುಶಿಲ್ಪದಲ್ಲಿ ರಾಷ್ಟ್ರಕೂಟರ ಕೊಡುಗೆಯನ್ನು ಎಲ್ಲೋರ ಮತ್ತು ಎಲಿಫೆಂಟಾ ಗುಹಾ ದೇವಾಲಯಗಳಲ್ಲಿ ಕಾಣಬಹುದು. ಮೂರನೇ ಕೃಷ್ಣನ ಆಸ್ಥಾನದಲ್ಲಿದ್ದ ಕವಿ ಪಂಪ, ವಿಕ್ರಮಾರ್ಜುನ ವಿಜಯವನ್ನು ರಚಿಸಿ ಕನ್ನಡದ ಆದಿಕವಿಯೆನಿಸಿಕೊಂಡ.



Scanned by CamScanner

ಕನ್ನಡದ ಸಾಮ್ರಾಜ್ಯಗಳು

# ವಿಜಯನಗರ ಸಾಮ್ರಾಜ್ಯ

• ಕಾಲಾವಧಿ: 1336-1646 • ರಾಜಧಾನಿ: ವಿಜಯನಗರ (ಹಂಪಿ)

ವಿಕ ಕನ್ನಡ ಉತ್ಸವ

ವಿಜಯನಗರ ಸಾಮ್ರಾಜ್ಯ 1336ರಲ್ಲಿ ಹಕ್ಕ (ಹರಿಹರ) ಮತ್ತು ಬುಕ್ಕ (ಬುಕ್ಕರಾಯ) ಎಂಬ ಅಣ್ಣತಮ್ಮಂದಿರಿಂದ ಗುರು ವಿದ್ಯಾರಣ್ಯರ ಪ್ರೇರಣೆಯಿಂದ ಸ್ಥಾಪಿತವಾಯಿತು. ಇಮ್ಮಡಿ ಹರಿಹರನು ಸಾಮ್ರಾಜ್ಯವನ್ನು ಇಡೀ ದಕ್ಷಿಣ ಭಾರತಕ್ಕೆ ವಿಸ್ತರಿಸಿದ. ಕೃಷ್ಣದೇವರಾಯರ ಆಳ್ವಿಕೆಯಲ್ಲಿ ಕೀರ್ತಿ ಉತ್ತುಂಗ ತಲುಪಿತು. ಕೃಷ್ಣದೇವರಾಯನ ಸೇನೆಯಲ್ಲಿ 1,00,000 ಕಾಲಾಳುಗಳು, 20,000 ಅಶ್ವಗಳು ಮತ್ತು 900 ಆನೆಗಳಿದ್ದವು. ರಾಯರ ಕಾಲದಲ್ಲಿ ವ್ಯಾಸತೀರ್ಥ, ವಾದಿರಾಜತೀರ್ಥ, ಪುರಂದರ, ಕನಕದಾಸ, ಅಣ್ಣಮಾಚಾರ್ಯ ಮುಂತಾದ ದಾಸವರೇಣ್ಯರಿದ್ದರು. ಕೃಷ್ಣದೇವರಾಯನೇ ಸ್ವತಃ ಒಳ್ಳೆಯ ಕವಿಯಾಗಿದ್ದ. ಇವರ ಆಸ್ಥಾನದಲ್ಲಿ ಅಲ್ಲಸಾನಿ ಪೆದ್ದನ್ನ, ತೆನಾಲಿ ರಾಮಕೃಷ್ಣ ಮುಂತಾದ ಅಷ್ಟದಿಗ್ಗಜರಿದ್ದರು. ವಿಜಯನಗರ ವಾಸ್ತುಶೈಲಿಯು ಚಾಲುಕ್ಯ, ಹೊಯ್ಸಳ, ಪಾಂಡ್ಯ ಮತ್ತು ಚೋಳರ ಶೈಲಿಗಳ ಸಂಯೋಜನೆ. ಈ ಶೈಲಿಯ ನೂರಾರು ದೇವಾಲಯಗಳು ನಾಡಿನಾದ್ಯಂತ ಹರಡಿವೆ. ಹಂಪಿಯು ದೇವಾಲಯಗಳ ನಾಡಾಗಿ ವಾಸ್ತುವೈಭವದಿಂದ ಮೆರೆಯಿತು. ಇವರ ಕಾಲದಲ್ಲಿ ಮುತ್ತುರತ್ನಗಳನ್ನು ಬೀದಿಗಳಲ್ಲಿ ಬಳ್ಳಗಳಲ್ಲಿ ಸುರಿದು ಮಾರಲಾಗುತ್ತಿತ್ತು. 1565ರಲ್ಲಿ ತಾಳಿಕೋಟೆಯಲ್ಲಿ ನಡೆದ ಕದನದಲ್ಲಿ ಬಹಮನಿ ಸುಲ್ತಾನರು ಗೆದ್ದು, ವಿಜಯನಗರದ ರಾಮರಾಯ ಸೋತನು.



Scanned by CamScanner

ಕನ್ನಡದ ಸಾಮ್ರಾಜ್ಯಗಳು

# ಮೈಸೂರಿನ ಒಡೆಯರು

• ಕಾಲಾವಧಿ: 1399- 1947 • ರಾಜಧಾನಿ: ಮೈಸೂರು

ವಿಕ ಕನ್ನಡ ಉತ್ಸವ

ಯದುರಾಯ(ವಿಜಯ) ಮತ್ತು ಕೃಷ್ಣರಾಯ ಎಂಬ ಇಬ್ಬರು ಸಹೋದರರು ಸ್ಥಾಪಿಸಿದರು. ಯದುರಾಯ ಮೊದಲಿನ ಒಡೆಯರ್. ಮೊದಲಿಗೆ ಇವರು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿದ್ದರು.



ವಿಜಯನಗರ ಸಾಮ್ರಾಜ್ಯ ಪತನದೊಂದಿಗೆ ಈ ಸಾಮ್ರಾಜ್ಯ ಸ್ವತಂತ್ರವಾಯಿತು. 17ನೆ ಶತಮಾನದಲ್ಲಿ ಸಾಮ್ರಾಜ್ಯವನ್ನು ವಿಸ್ತರಿಸಿದರು. ಮೊದಲ ಕಂಠೀರವ ನರಸರಾಜ ಒಡೆಯರ್ ಮತ್ತು ಚಿಕ್ಕದೇವರಾಜ ಒಡೆಯರ್ ಆಳ್ವಿಕೆಯಲ್ಲಿ ದಕ್ಷಿಣ ಕರ್ನಾಟಕವನ್ನು ವ್ಯಾಪಿಸಿಕೊಂಡರು. ನಾಲ್ವಡಿ ಕೃಷ್ಣರಾಜ ಒಡೆಯರ್ ಆಳ್ವಿಕೆಯಲ್ಲಿ ಮೈಸೂರು ರಾಜ್ಯವು ಉಚ್ಛ್ರಾಯ ಕಂಡಿತು. ವಿಶ್ವೇಶ್ವರಯ್ಯ ದಿವಾನರಾಗಿದ್ದರು. ಇವರ ಕಾಲದಲ್ಲಿ ಕನ್ನಂಬಾಡಿ ಆಣೆಕಟ್ಟು, ಭದ್ರಾವತಿ ಉಕ್ಕು ಕಾರ್ಖಾನೆ, ಮೈಸೂರು ವಿವಿ ಸ್ಥಾಪನೆಗೊಂಡವು. ಮೈಸೂರು ಕೈಗಾರಿಕೆ, ನೀರಾವರಿಯಲ್ಲಿ ಆಧುನಿಕವಾಯಿತು. ಚಿಕ್ಕದೇವರಾಜರ ಆಳ್ವಿಕೆಯಲ್ಲೂ ಅನೇಕ ಸುಧಾರಣೆಗಳಾದವು. ಮಿರ್ಜಾ ಇಸ್ಮಾಯಿಲ್, ಪೂರ್ಣಯ್ಯ ದಿವಾನರಾಗಿದ್ದರು. ಮೈಸೂರು ಸಾಮ್ರಾಜ್ಯದಲ್ಲಿ ಕನ್ನಡ ಸಾಹಿತ್ಯ ಹಾಗೂ ಕರ್ನಾಟಕ ಸಂಗೀತಗಳು ತುಂಬಾ ಬೆಳವಣಿಗೆ ಕಂಡವು. ಲಕ್ಷ್ಮೀಶ ಮತ್ತು ಸರ್ವಜ್ಞರು ತಮ್ಮ ಛಾಪನ್ನು ಮೂಡಿಸಿದರು. ಮುಮ್ಮಡಿ ಕೃಷ್ಣರಾಜ, ಒಂಬತ್ತನೇ ಚಾಮರಾಜರು ಸ್ವತಃ ವಿದ್ವಾಂಸರಾಗಿದ್ದರು.

Scanned by CamScanner

ಕನ್ನಡದ ಸಾಮ್ರಾಜ್ಯಗಳು

# ಕಿತ್ತೂರಿನ ದೇಸಾಯಿಗಳು

• **ಕಾಲಾವಧಿ:** 1585 -1824 • **ರಾಜಧಾನಿ:** ಕಿತ್ತೂರು

ಮಲೆನಾಡಿನ ಗೌಡ ಮನೆತನದಿಂದ ಬಂದ ಮಲ್ಲ ಹೆಸರಿನ ಸೋದರರಿಬ್ಬರು ವಿಜಾಪುರದ ಆದಿಲಶಾಹಿ ಸೈನ್ಯದಲ್ಲಿದ್ದರು. ನಂತರ ತಮ್ಮದೇ ಪಾಳಯವನ್ನು ಸ್ಥಾಪಿಸಿದರು. ಇವರನ್ನು ಅಧಿಕಾರದಿಂದ ಕೆಡವಲು ಬ್ರಿಟಿಷರು, ಪೇಶ್ವೆಗಳು, ನಿಜಾಮರು ಯತ್ನಿಸುತ್ತಿದ್ದರು. ರಾಣಿ ಚೆನ್ನಮ್ಮ ಹುಟ್ಟಿದ್ದು 1778ರಲ್ಲಿ. ಪತಿ ದೊರೆ ಮಲ್ಲಸರ್ಜ. ಮಲ್ಲಸರ್ಜ ದೊರೆಯನ್ನು ಟಿಪ್ಪು ಸುಲ್ತಾನ ಸೆರೆಹಿಡಿದಿಟ್ಟಿದ್ದ. ಉಪಾಯದಿಂದ ತಪ್ಪಿಸಿಕೊಂಡ ದೊರೆ 1803ರಲ್ಲಿ ವೆಲ್ಲೆಸ್ಲಿಗೆ



ನೆರವು ನೀಡಿ ಕಿತ್ತೂರನ್ನು ಭದ್ರಗೊಳಿಸಿದ್ದ. ಆದರೆ ಪೇಶ್ವೆಯವರು ಮಲ್ಲಸರ್ಜನನ್ನು ಸೆರೆ ಹಿಡಿದು 3 ವರ್ಷ ಪುಣೆಯಲ್ಲಿಟ್ಟರು. 1816ರಲ್ಲಿ ಬಿಡುಗಡೆ ಹೊಂದಿ ಮರಳುವಾಗ ದಾರಿಯಲ್ಲಿಯೆ ಕೊನೆಯುಸಿರೆಳೆದ. ಯುದ್ಧವಿದ್ಯೆಗಳನ್ನು ಕಲಿತಿದ್ದ ಚೆನ್ನಮ್ಮ, ನಿಷ್ಠುರ ನೆರವಿನಿಂದ ತನ್ನ ದತ್ತಕ ಮೊಮ್ಮಗನಿಗೆ ಪಟ್ಟ ಕಟ್ಟಿದಳು. ದತ್ತಕವನ್ನು ಧಾರವಾಡದ ಕಲೆಕ್ಟರ್ ಥ್ಯಾಕರೆ ನಿರಾಕರಿಸಿ ಕಿತ್ತೂರು ಸಂಸ್ಥಾನವನ್ನು ಆಂಗ್ಲರ ಸುಪರ್ದಿಗೆ ವಹಿಸುವಂತೆ ಒತ್ತಡ ಹೇರಿದ. ಚನ್ನಮ್ಮ ಧಿಕ್ಕರಿಸಿದಳು. ಥ್ಯಾಕರೆ ಕಿತ್ತೂರು ಕೋಟೆಗೆ ಮುತ್ತಿಗೆ ಹಾಕಿದ ಸಂಗೊಳ್ಳಿ ರಾಯಣ್ಣ, ಬಾಳಪ್ಪ, ಗುರುಸಿದ್ದಪ್ಪ ಮುಂತಾದ ವೀರರು ಕಾದಾಡಿ ಬ್ರಿಟಿಷರನ್ನು ಸೋಲಿಸಿದರು. ಆದರೆ ಬ್ರಿಟಿಷರ ಎರಡನೇ ದಾಳಿಯಲ್ಲಿ ಸೋತಳು. ಅವರ ಸೆರೆಮನೆಯಲ್ಲಿ ಮೃತಪಟ್ಟಳು.

Scanned by CamScanner

ಕನ್ನಡದ ಸಾಮ್ರಾಜ್ಯಗಳು

# ಯಲಹಂಕ ನಾಡಪ್ರಭುಗಳು

• **ಕಾಲಾವಧಿ:** 1418- 1728 • **ರಾಜಧಾನಿ:** ಬೆಂಗಳೂರು

ಬೆಂಗಳೂರು 101 ವರ್ಷ ಕಾಲ (1537-1638) ಯಲಹಂಕ ನಾಡಪ್ರಭುಗಳ ರಾಜಧಾನಿಯಾಗಿತ್ತು. ಕೆಂಪೇಗೌಡರು ದಾರ್ಶನಿಕ ಮತ್ತು ಶಕ್ತಿಯುತ ರಾಜನಾಗಿದ್ದರು. ಸಣ್ಣಪುಟ್ಟ ರಾಜರನ್ನು ಗೆದ್ದು ಜನತೆಯನ್ನು ಒಗ್ಗೂಡಿಸಿ ಸಾಮ್ರಾಜ್ಯವನ್ನು ಕಟ್ಟಿದರು. ಬಳೆಪೇಟೆಯ ರಂಗನಾಥಸ್ವಾಮಿ ದೇವಸ್ಥಾನ, ಮಾಗಡಿ ಮತ್ತು ಸಾವನದುರ್ಗದ ಕೋಟೆಗಳು, ಲಾಲ್‌ಬಾಗ್, ಕೆಂಪಾಂಬುಧಿ ಕೆರೆಗಳು, ಹಲಸೂರು ಕೆರೆ, ಮೇಖ್ರಿ ಸರ್ಕಲ್ ಬಳಿಯ ಗಡಿಯಾರ ಗೋಪುರಗಳು ಕೆಂಪೇಗೌಡರ ನಿರ್ಮಾಣ.



ವಿಜಯನಗರದದಂತೆ ಬೆಂಗಳೂರನ್ನು ಕಟ್ಟಬೇಕೆಂಬುದು ಅವರ ಕನಸಾಗಿತ್ತು. ದಂತಕಥೆಯಂತೆ, ಕೆಂಪೇಗೌಡರು ಬೇಟೆಗೆ ಬಂದು ಸುಸ್ತಾಗಿ ಮರದ ಕೆಳಗೆ ನಿದ್ದೆ ಹೋಗಿದ್ದಾಗ, ಸ್ಥಳದ ಸೋಮೇಶ್ವರ ದೇವರು ಕನಸಿನಲ್ಲಿ ಬಂದು ಅಲ್ಲಿ ದೇವಸ್ಥಾನ ಕಟ್ಟಿಸಲು ಹೇಳಿದರು. ಅದರಂತೆ ದೇವಾಲಯ ಕಟ್ಟಿಸಿದರು. ನಂತರ ಬೆಂಗಳೂರಿನ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು ಮಂಟಪ ಕಟ್ಟಿ, ರಾಜಧಾನಿಯ ಗಡಿ ಗುರುತಿಸಿ ದರು. ಇಮ್ಮಡಿ ಕೆಂಪೇಗೌಡರು 48 ವರುಷ ಆಳ್ವಿಕೆ ನಡೆಸಿದರು (1585-1633). ಬಿಜಾಪುರದ ಆದಿಲ್‌ಶಾಹಿ ಸೈನ್ಯ ಬೆಂಗಳೂರಿಗೆ ದಾಳಿ ಮಾಡಿ ವಶಪಡಿಸಿ ಕೊಂಡಿತು. ಮುಮ್ಮಡಿ ಕೆಂಪೇಗೌಡರು 1638ರಲ್ಲಿ ಮಾಗಡಿಗೆ ಸ್ಥಳಾಂತರಿಸಿಕೊಂಡರು. ಅವರ ಸಂತತಿಯವರು 1728ರವರೆಗೆ ಆಳಿದರು.

Scanned by CamScanner

# ಕನ್ನಡದ ಸಾಮ್ರಾಜ್ಯಗಳು

# ಹೊಯ್ಸಳರು

• **ಕಾಲಾವಧಿ:** 1006- 1346 • **ರಾಜಧಾನಿ:** ಬೇಲೂರು, ಹಳೆಬೀಡು

ವಿಕ ಕನ್ನಡ ಉತ್ಸವ

ದಂತಕಥೆಯ ಪ್ರಕಾರ ಜೈನಗುರು ಸುದತ್ತರು, ಹುಲಿಯನ್ನು ಹೊಡೆಯಲು ತನ್ನ ಶಿಷ್ಯ ಸಳನಿಗೆ 'ಹೊಯ್ ಸಳ' ಎಂದು ಆಜ್ಞಾಪಿಸಿದರು. ಇದೇ ಹೊಯ್ಸಳ ಶಬ್ದದ ಮೂಲ. ಈ ವಂಶದ ವಿಷ್ಣುವರ್ಧನನು ದೊಡ್ಡ ಸ್ವತಂತ್ರ ರಾಜನಾಗಿ ಹೊಮ್ಮಿದ. ಚೋಳರಿಂದ ಗಂಗಾವತಿಯನ್ನು ಜಯಿಸಿ ರಾಜಧಾನಿಯನ್ನು ಬೇಲೂರಿನಿಂದ ಹಳೆಬೀಡಿಗೆ ಸ್ಥಳಾಂತರಿಸಿದ. ವಿಷ್ಣುವರ್ಧನನ ಮಹತ್ವಾಕಾಂಕ್ಷೆಯನ್ನು ಅವರ ಮೊಮ್ಮಗ ಇಮ್ಮಡಿ ವೀರಬಲ್ಲಾಳ(1187- 1193) ಈಡೇರಿಸಿದ. ಇವನು ಚೋಳರನ್ನು, ಪಾಂಡ್ಯರನ್ನು ಸೋಲಿಸಿ ದಕ್ಷಿಣ ಚಕ್ರವರ್ತಿ ಎಂಬ ಬಿರುದು ಗಳಿಸಿದ. ಇವರ ಸಮಯದಲ್ಲಿ ಮೂರು ಪ್ರಮುಖ ಧಾರ್ಮಿಕ ಬೆಳವಣಿಗೆಗಳು (ಬಸವ, ಮಧ್ವಾಚಾರ್ಯ ಮತ್ತು ರಾಮಾನುಜಾಚಾರ್ಯರಿಂದ) ನಡೆದವು. ವಿಷ್ಣುವರ್ಧನ ಜೈನ ಮತದಿಂದ ವೈಷ್ಣವಮತಕ್ಕೆ ಮತಾಂತರಗೊಂಡ. ಜಯತೀರ್ಥ, ವ್ಯಾಸತೀರ್ಥ, ಶ್ರೀಪಾದರಾಜ, ವಾದಿರಾಜತೀರ್ಥ, ವಿಜಯದಾಸ, ಗೋಪಾಲದಾಸರು ಬೋಧನೆಗಳನ್ನು ಹರಡಿದರು. ಹೊಯ್ಸಳರು ವಿದ್ವಾಂಸರಾದ ಜನ್ನ, ರುದ್ರಭಟ್ಟ, ಹರಿಹರ, ರಾಘವಾಂಕರನ್ನು ಪೋಷಿಸಿದರು. ಹೊಯ್ಸಳ ವಾಸ್ತುಶಿಲ್ಪವನ್ನು ಬೇಲೂರಿನ ಚೆನ್ನಕೇಶವ, ಹಳೇಬೀಡಿನ ಹೊಯ್ಸಳೇಶ್ವರ, ಸೋಮನಾಥಪುರದ ಚೆನ್ನಕೇಶವ ದೇವಸ್ಥಾನಗಳಲ್ಲಿ ಕಾಣಬಹುದು.



Scanned by CamScanner


ಕನ್ನಡದ ಸಾಮ್ರಾಜ್ಯಗಳು

# ಚಿತ್ರದುರ್ಗದ ನಾಯಕರು

ವಿಕ ಕನ್ನಡ ಉತ್ಸವ

• **ಕಾಲಾವಧಿ:** 1300-1779 • **ರಾಜಧಾನಿ:** ಚಿತ್ರದುರ್ಗ

ಹೊಯ್ಸಳ ಮತ್ತು ವಿಜಯನಗರ ಸಾಮ್ರಾಜ್ಯಗಳ ಕಾಲದಲ್ಲಿ ಇವರು ಸಾಮಂತರಾಗಿದ್ದರು. ನಂತರ ಕೆಲವು ಕಾಲ ಸ್ವತಂತ್ರವಾಗಿ ಮತ್ತೆ ಕೆಲವೊಮ್ಮೆ ಮೈಸೂರು, ಮೊಘಲರು ಮತ್ತು ಮರಾಠರಿಗೆ ಸಾಮಂತರಾದರು.



ಚಿತ್ರದುರ್ಗ ಅಭೇದ್ಯವಾದ ಕೋಟೆಯಾಗಿದ್ದು ರಾಜ್ಯದ ಹೃದಯದಂತಿತ್ತು. ಚಿತ್ರದುರ್ಗದ ಮಹಾನ್ ನಾಯಕರಲ್ಲಿ ಒಬ್ಬರಾದ ಬಿಳಿಚೋಡಿನ ಬಿಚ್ಚುಗತ್ತಿ ಬರಮಣ್ಣ ನಾಯಕರು (1689- 1721) ಮರಾಠರ ಮೈತ್ರಿ ಸಾಧಿಸಿ ಮೊಘಲರ ವಿರುದ್ಧ ಹೋರಾಡಿದರು. ನಂತರ ಅವರೊಂದಿಗೆ ಮೈತ್ರಿ ಸಾಧಿಸಿದರು. ಚಿತ್ರದುರ್ಗದ ಕೋಟೆಯ ರಚನೆ ಇವರ ಕಾಲದಲ್ಲಿ ಆಯಿತು. ಈ ವಂಶದಲ್ಲಿ ಜನಿಸಿದ ಮದಕರಿ ನಾಯಕರು (1758-1779) ಕೆಚ್ಚೆದೆಯ ಯೋಧ. ಇವರ ಸಮಯದಲ್ಲಿ ಮೈಸೂರಿನ ಹೈದರಾಲಿ ಪದೇ ಪದೇ ಇಲ್ಲಿಗೆ ದಾಳಿ ನಡೆಸಿದ. ಚಿತ್ರದುರ್ಗದ ಕೋಟೆಯ ಕಿಂಡಿ ಮತ್ತು ಒನಕೆ ಓಬವ್ವನ ಸಾಹಸ ಇಂದು ಕನ್ನಡನಾಡಿನ ಜನಪದ ದಂತಕತೆಯಾಗಿದೆ. ತನ್ನದೇ ಆಸ್ಥಾನದ ಅಧಿಕಾರಿಗಳ ದ್ರೋಹದಿಂದಾಗಿ ಮದಕರಿ ನಾಯಕ ಹೈದರಾಲಿಯ ಕೈಗೆ ಸಿಲುಕಿ ಹತರಾದರು. ಚಿತ್ರದುರ್ಗದ ಕೋಟೆ ಏಳು ಸುತ್ತಿನ ಕೋಟೆ ಎಂದು ಪ್ರಸಿದ್ಧವಾಗಿದೆ. ಹದಿನೆಂಟು ಪುರಾತನ ದೇವಾಲಯಗಳು ಕೋಟೆಯ ಒಳಗಿವೆ. ದುರ್ಗದ ಲೇಖಕ ತರಾಸು ಕಾದಂಬರಿಗಳಲ್ಲಿ ನಾಯಕವಂಶದ ಚಿತ್ರಣ ಕಾಣಬಹುದು.

Scanned by CamScanner

# ಕಲ್ಯಾಣದ ಚಾಲುಕ್ಯರು

ವಿಕ ಕನ್ನಡ ಉತ್ಸವ

• ಕಾಲಾವಧಿ: ಕ್ರಿ.ಶ.973-1200 • ರಾಜಧಾನಿ: ಮಾನ್ಯಖೇಟ

ಕ್ರಿ.ಶ. 973ರಲ್ಲಿ ರಾಷ್ಟ್ರಕೂಟ ರಾಜವಂಶದ ಸಾಮಂತನಾದ ಇಮ್ಮಡಿ ತೈಲಪನು ತನ್ನ ಅಧಿಪತಿಗಳನ್ನು ಸೋಲಿಸಿ ಮಾನ್ಯಖೇಟವನ್ನು ರಾಜಧಾನಿಯಾಗಿಸಿದನು. ಮೊದಲ ಸೋಮೇಶ್ವರರ ಆಳ್ವಿಕೆಯಲ್ಲಿ ಬೆಳೆದ ಈ ರಾಜವಂಶ ತನ್ನ ರಾಜಧಾನಿಯನ್ನು ಕಲ್ಯಾಣಿಗೆ ಸ್ಥಳಾಂತರಿಸಿತು. ಉತ್ತರದ ನರ್ಮದಾದಿಂದ ದಕ್ಷಿಣದ ಕಾವೇರಿ ತನಕ ರಾಜ್ಯ ವ್ಯಾಪಿಸಿತು. 6ನೇ ವಿಕ್ರಮಾದಿತ್ಯನ ಐವತ್ತು ವರುಷದ ಆಳ್ವಿಕೆ ಕರ್ನಾಟಕದ ಇತಿಹಾಸದಲ್ಲಿ ಪ್ರಮುಖ ಕಾಲಮಾನ



ವಾಗಿದ್ದು, ಇತಿಹಾಸ ತಜ್ಞರು ಇದನ್ನು ಚಾಲುಕ್ಯ ವಿಕ್ರಮ ಯುಗವೆಂದು ಕರೆಯುತ್ತಾರೆ. ಉತ್ತರ ಮತ್ತು ದಕ್ಷಿಣದಲ್ಲಿ ರಾಜ್ಯವನ್ನು ನಿಯಂತ್ರಿಸಿದ್ದಲ್ಲದೆ ಚೋಳರನ್ನು ಸೋಲಿಸಿದನು. ಈತ ಪರಾಕ್ರಮಿ, ಸರ್ವಧರ್ಮಸಹಿಷ್ಣು, ಕಠಿಣ ಅಧಿಕಾರಿ, ಕಲಾಶ್ರಯ. ಇವರ ಕಾಲದಲ್ಲಿ ಬಸವಣ್ಣ ಮತ್ತು ಇತರ ವಚನಕಾರರು ಸಮಾನತೆ, ಜಾತಿನಾಶ, ಲಿಂಗಪೂಜೆ, ಕಾಯಕಪೂಜೆಯ ತತ್ವವನ್ನು ಉಪದೇಶಿಸಿದರು. ಅಕ್ಕಮಹಾದೇವಿ, ಅಲ್ಲಮಪ್ರಭು, ಬಸವಣ್ಣ, ದಾಸಿಮಯ್ಯ, ಪ್ರಭುದೇವ, ಚೆನ್ನಬಸವ, ಸಿದ್ದರಾಮ ಮುಂತಾದವರಿಂದ ಕೂಡಿದ ಅನುಭವ ಮಂಟಪದ ಆಗಿನ ದೊಡ್ಡ ಸಂಗತಿಯಾಗಿತ್ತು. ಆಗಿನ ವಿದ್ವಾಂಸರಲ್ಲಿ ರನ್ನ, ನಾಗವರ್ಮ, ದುರ್ಗಸಿಂಹ ಗಮನಾರ್ಹರಾದವರು. ರನ್ನನಿಗೆ ರಾಜ ತೈಲಪ ಆಶ್ರಯ ನೀಡಿದ್ದ. ಗಣಿತಶಾಸ್ತ್ರಜ್ಞ ಭಾಸ್ಕರಾಚಾರ್ಯ ಈ ಅವಧಿಯಲ್ಲಿ ಬಿಜಾಪುರದಲ್ಲಿದ್ದ.

Scanned by CamScanner